# ಎನ್‌ಐಟಿಕೆಯಲ್ಲಿ ಸ್ವಚ್ಛತಾ ಪಖ್ವಾಡಾ

ಮಂಗಳೂರು: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಸುರತ್ಕಲ್ ಸೆ.1-15ರರವರೆಗೆ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಉಪಕ್ರಮ ಸ್ವಚ್ಛತಾ ಪಖ್ವಾಡಾ ಆಚರಿಸುತ್ತಿದೆ. ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳಾದ ಸ್ವಾಮಿ ಏಕಗಮ್ಯಾನಂದ, ರಾಮಕೃಷ್ಣ ಮಿಷನ್ ಮಂಗಳೂರು ಉದ್ಘಾಟಿಸಿದರು, ನಂತರ 'ಶೂನ್ಯ ತ್ಯಾಜ್ಯ ನಿರ್ವಹಣೆ' ಕುರಿತು ಕಾರ್ಯಾಗಾರವನ್ನು ಕ್ಯಾಂಪಸ್ ವೇಸ್ಟ್ ಟು ಎನರ್ಜಿ ಯೋಜನೆಯ ಯೋಜನಾ ತನಿಖಾಧಿಕಾರಿ ಡಾ.ವಾಸುದೇವ ಎಂ., ಪ್ರಸ್ತುತಪಡಿಸಿದರು.

ಎನ್‌ಐಟಿಕೆ ಸೇವಾದಳದ ಆಶ್ರಯದಲ್ಲಿ, 2019ರ ಆಗಸ್ಟ್‌ನಿಂದ ಸಿಬ್ಬಂದಿ, ಅಧ್ಯಾಪಕರು, ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ, ಸಂಸ್ಥೆಯ ಆವರಣದಲ್ಲಿ ಸಾಪ್ತಾಹಿಕ ಸ್ವಚ್ಛ ಭಾರತ್ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. 49 ವಾರಗಳ ಸ್ವಚ್ಛತಾ ಕಾರ್ಯಕ್ರಮಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ. ಎನ್‌ಐಟಿಕೆ ಸುರತ್ಕಲ್ ಸಿಬ್ಬಂದಿ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲು ಕ್ಯಾಂಪಸ್‌ನಲ್ಲಿ ಸ್ವಚ್ಛತಾ ಚಟುವಟಿಕೆಗಳನ್ನು ಮುಂದುವರಿಸಲಾಗಿದೆ.

ಕುಡಿಯುವ ನೀರಿನ ವ್ಯರ್ಥ ಬಳಕೆ ಕಡಿಮೆಗೊಳಿಸಲು, ಸ್ವಚ್ಛತೆ-ಉನ್ನತ ಮಟ್ಟದ ನೈರ್ಮಲ್ಯ ಕಾಪಾಡಲು ಕ್ಯಾಂಪಸ್ ಹಾಗೂ ಸುತ್ತಮುತ್ತ ಎಲ್ಲಾ ಇಲಾಖೆಗಳು ವಿನೂತನ ಸ್ವಚ್ಛತಾ ಚಟುವಟಿಕೆ ನಡೆಸುತ್ತವೆ. ನವೀನ/ಸೃಜನಾತ್ಮಕ ಚಟುವಟಿಕೆಗಳಿಗೆ ಸೂಕ್ತ ರೀತಿಯಲ್ಲಿ ಕೊಡುಗೆ ನೀಡಿದವರಿಗೆ ಉತ್ತಮ ಇಲಾಖೆಗಳು ಎಂದು ಪರಿಗಣಿಸಿ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಪ್ರೊ.ಮೋಹನ್ ಕುಮಾರ್ ಜಿ.ಸಿ (ಪ್ರಭಾರ ನಿರ್ದೇಶಕರು), ಶ್ರೀ ರವೀಂದ್ರನಾಥ್, ರಿಜಿಸ್ಟ್ರಾರ್, ಶ್ರೀರಾಮ್ ಮೋಹನ್ ವೈ, ಜಂಟಿ ರಿಜಿಸ್ಟ್ರಾರ್, ಡೀನ್‌ಗಳು, ಎಚ್‌ಒಡಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಎನ್‌ಟಿಕೆ ಸೂರತ್ಕಲ್‌ನಲ್ಲಿ ಸ್ವಚ್ಛತಾ ಪಖ್ವಾಡಾ ಕಾರ್ಯಕ್ರಮ ಉದ್ಘಾಟಿಸಲಾಯಿತು.

Samyukta Karnataka, Date: 02/09/22, P. No, 08